INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,174-183
Peer -Reviewed, Refereed Journal

# ಕರ್ನಾಟಕದಲ್ಲಿ ಲಿಂಗಾನುಪಾತದ ಅಸಮತೋಲನ–ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಡಾ.ಪೂರ್ಣಿಮ.ಬಿ.[1]

**ಸಾರಾಂಶ**

ಒಂದು ದೇಶದ ಜನಸಂಖ್ಯಾ ಬೆಳವಣಿಗೆ ಮತ್ತು ಗಾತ್ರವನ್ನು ಲಿಂಗಾನುಪಾತವು ನಿರ್ಧರಿಸುತ್ತದೆ 1901 ರಿಂದ 2011ರ ಜನಗಣತಿಯ ವರದಿಗಳಲ್ಲಿ ಲಿಂಗಾನುಪಾತದಲ್ಲಿ ಗಣನೀಯ ಏರಿಳಿತಗಳು ಸಂಭವಿಸಿವೆ. 2011ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಲಿಂಗಾನುಪಾತ ದ ದೃಷ್ಟಿಯಲ್ಲಿ ದಕ್ಷಿಣ ಭಾಗದ ರಾಜ್ಯಗಳಾದ ಕೇರಳ ಮೊದಲನೆಯ ಸ್ಥಾನವನ್ನು ತಮಿಳುನಾಡು ಮೂರನೇ ಸ್ಥಾನವನ್ನು ಕರ್ನಾಟಕ ಹತ್ತನೆಯ ಸ್ಥಾನವನ್ನು ಪಡೆದಿದೆ.

ಈ ಸಂಶೋಧನಾ ಲೇಖನವು ಕರ್ನಾಟಕ ದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಲಿಂಗಾನುಪಾತದ ಪ್ರಮಾಣ ವ್ಯತ್ಯಾಸಗಳು ಅದರಲ್ಲೂ ವಿಶೇಷವಾಗಿ ಗ್ರಾಮೀಣ ನಗರ ಪ್ರದೇಶಗಳನ್ನು ಕೇಂದ್ರೀಕರಿಸಿ ಅಧ್ಯಯನ ಮಾಡಲಾಗಿದೆ ಲಿಂಗಾನುಪಾತದ ಮೇಲೆ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ ದುರಾದೃಷ್ಟವೆಂದರೆ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗಿದ್ದರೆ ಸಮಾಧಾನಕರವಾದ ವಿಷಯವೆಂದರೆ ಕೆಲವು ಜಿಲ್ಲೆಗಳಲ್ಲಿ ಸ್ವಲ್ಪಮಟ್ಟಿನ ಏರಿಕೆಯನ್ನು ಗುರುತಿಸಲಾಗಿದೆ ಈ ಸಂಶೋಧನಾ ಲೇಖನವೂ ಕರ್ನಾಟಕದ ಜಿಲ್ಲೆಗಳಲ್ಲಿ ಇಂತಹ ವ್ಯತಿರಿಕ್ತ ಲಿಂಗಾನುಪಾತದ ಪ್ರಮಾಣವನ್ನು ಅಧ್ಯಯನ ಮಾಡಿ ಇದರ ಕಾರಣ ಪರಿಣಾಮಗಳನ್ನು ವಿವರಿಸುವ ಮೂಲಕ ಸಮೃದ್ಧ ಆರೋಗ್ಯಕರ ಕರ್ನಾಟಕ ರಾಜ್ಯವನ್ನು ನಿರ್ಮಿಸಲು ಲಿಂಗಾನುಪಾತದ ಅಸಮತೋಲನವನ್ನು ನಿವಾರಿಸಲು ಹಲವಾರು ಸಲಹೆಗಳನ್ನು ನೀಡಿದೆ.

**ಪ್ರಮುಖ ಪದಗಳು** :–ಜನಗಣತಿ, ಲಿಂಗಾನುಪಾತ, ಅಸಮತೋಲನ ಜನಸಂಖ್ಯಾ ಬೆಳವಣಿಗೆ ಲಿಂಗಾನುಪಾತವನ್ನು ಪ್ರಭಾವಿಸುವ ಅಂಶಗಳು.

[1] **.ಸಹಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ.**

**ಪೀಠಿಕೆ.**

ಸ್ವತಂತ್ರ ಭಾರತದಲ್ಲಿ 1951 ರ ದಶಕದಲ್ಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಜನಗಣತಿ ಯನ್ನು ಪ್ರಾರಂಭಿ ಲಾಯಿತು ಒಂದು ದೇಶದ ಜನಸಂಖ್ಯೆಯನ್ನು ಅಥವಾ ಒಂದು ಪ್ರದೇಶದ ಜನರ ಜನನದರ ಮರಣದರ ವೃತ್ತಿ ವಲಸೆ ಹಾಗೂ ಸಾಮಾಜಿಕ ಆರ್ಥಿಕ ಧಾರ್ಮಿಕ ರಾಜಕೀಯ ಪರಿಸ್ಥಿತಿಗಳ ಬಗ್ಗೆ ವೈಜ್ಞಾನಿಕ ವಿಧಾನಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಕ್ರೋಡಿಕರಿಸಿ ವಿಶ್ಲೇಷಿಸುವ ಪ್ರಕ್ರಿಯೆ ಜನಗಣತಿ.

ಜನಸಂಖ್ಯೆಯ ರಚನೆಯಲ್ಲಿ ಲಿಂಗ ಸಂಯೋಜನೆಯು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಲಿಂಗಾನುಪಾತ ಅಥವಾ ಲಿಂಗ ಸಂಯೋಜನೆಯು ಜನಸಂಖ್ಯಾ ರಚನೆಯ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುವ ಸಾಮರ್ಥ್ಯವನ್ನು ಹೊಂದಿದೆ ಒಂದು ಸಾವಿರ ಪುರುಷರಿಗೆ ಎಷ್ಟು ಮಹಿಳೆಯರು ಇದ್ದಾರೆ ಎಂಬುದನ್ನು ಕಂಡುಕೊಳ್ಳುವುದಾಗಿದೆ ಇದನ್ನೇ ಲಿಂಗ ಪ್ರಮಾಣ ಅಥವಾ ಲಿಂಗಾನುಪಾತ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ಲಿಂಗ ಪ್ರಮಾಣ ಅಥವಾ ಲಿಂಗಾನುಪಾತ ಒಂದು ದೇಶದ ಜನಸಂಖ್ಯೆಯ ರಚನೆಯಲ್ಲಿ ಪ್ರತ್ಯಕ್ಷವಾಗಿ ಪ್ರಭಾವ ಬೀರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ ಲಿಂಗವನ್ನಾಧಾರಿತ ವಲಸೆ ಇದರ ಪ್ರಮಾಣ ಜನನದಲ್ಲಿ ಲಿಂಗದ ಪ್ರಮಾಣ ಲಿಂಗಾಧಾರಿತ ಭ್ರೂಣ ಮತ್ತು ಶಿಶುಹತ್ಯೆಯ ಸಂಖ್ಯೆ ಇಂತಹ ಹಲವಾರು ಅಂಶಗಳು ಲಿಂಗ ಪ್ರಮಾಣದ ವ್ಯತ್ಯಾಸಕ್ಕೆ ಕಾರಣಗಳಾಗಿವೆ . ಈ ಎಲ್ಲಾ ಅಂಶಗಳ ಪ್ರಭಾವವನ್ನು ಅಧ್ಯಯನ ಮಾಡಲು ಈ ಸಂಶೋಧನಾ ಪ್ರಬಂಧದಲ್ಲಿ ಅಥವಾ ಲೇಖನದಲ್ಲಿ ಪ್ರಯತ್ನಿಸಲಾಗಿದೆ.

ಜನಸಂಖ್ಯಾ ಸಂಯೋಜನೆಯಲ್ಲಿ ಲಿಂಗಾನುಪಾತವು ಬಹು ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಸಾಮಾನ್ಯವಾಗಿ ಸೊನ್ನೆಯಿಂದ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳ ಸಂಖ್ಯೆಯಲ್ಲಿನ ವ್ಯತ್ಯಾಸ ಕಂಡು ಬಂದರು ಮುಂದಿನ ಲಿಂಗ ಸಂಯೋಜನೆಯಲ್ಲಿ ಬಹಳಷ್ಟು ಏರುಪೇರುಗಳಾಗುತ್ತಿವೆ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಮಹಿಳೆಯರ ಪ್ರಮಾಣ ಕಡಿಮೆ ಇದೆ 2011ರ ಜನಗಣತಿಯಂತೆ ದೇಶದ ಲಿಂಗಾನುಪಾತ ಸಾವಿರ ಪುರುಷರಿಗೆ 943. ಮಹಿಳೆಯರಿದ್ದಾರೆ ಆದರೆ ಇಂದು ಜನಗಣತಿ 2021 ರಲ್ಲಿ ಆರಂಭವಾಗಬೇಕಿದ್ದರೂ ಸಹ ಕೋವಿಡ್ ಎಂಬ ಮಾರಕ ಕಾಯಿಲೆಯಿಂದಾಗಿ 2026 ರಿಂದ ಆರಂಭವಾಗಿದ್ದು ಇನ್ನಷ್ಟೇ ಇದರ ಪ್ರಕ್ರಿಯೆ ಮುಂದುವರೆಯುತ್ತಿದೆ. ಕರ್ನಾಟಕದಲ್ಲಿ 2011ರ ಜನಗಣತಿಯ ಪ್ರಕಾರ ಸಾವಿರ ಪುರುಷರಿಗೆ 973 ಮಹಿಳೆಯರು ಇದ್ದಾರೆ ಎಂಬ ಅಂಕಿ ಅಂಶವನ್ನು ನೀಡಿರುವುದು ಸ್ವಲ್ಪ ಸಮಾಧಾನಕರವಾದ ಸಂಗತಿಯಾಗಿದೆ.

**ಅಧ್ಯಯನದ ಉದ್ದೇಶಗಳು.**

ಪ್ರಸ್ತುತ ಸಂಶೋಧನಾ ಲೇಖನವು ಕೆಳಕಂಡ ಉದ್ದೇಶಗಳನ್ನು ಒಳಗೊಂಡಿದೆ.

1. ಕರ್ನಾಟಕದಲ್ಲಿ 1901 ರಿಂದ 2011ರ ದಶಕಗಳಲ್ಲಿ ಜನಗಣತಿಯಲ್ಲಿ ಕಂಡುಬಂದಿರುವಂತಹ ಲಿಂಗಾನುಪಾತದ ವಿಶ್ಲೇಷಣೆ ಮಾಡುವುದು.

2.ಲಿಂಗಾನುಪಾತದ ವ್ಯತ್ಯಾಸಗಳ ಮೇಲೆ ಪ್ರಭಾವ ಬೀರುವಂತಹ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳ ಬಗ್ಗೆ ಪರಿಶೀಲಿಸುವುದು.

3.ಕರ್ನಾಟಕದಲ್ಲಿ ಲಿಂಗಾನುಪಾತದ ವ್ಯತ್ಯಾಸಗಳಿಗೆ ಕರ್ನಾಟಕ ಸರ್ಕಾರ ಕೈಗೊಂಡಿರುವಂತಹ ಕ್ರಮಗಳ ಬಗ್ಗೆ ಅಧ್ಯಯನ ನಡೆಸುವುದು ಮತ್ತು ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಸಂಶೋಧನೆಯು ಸಂಪೂರ್ಣವಾಗಿ ಮಾಧ್ಯಮಿಕ ಮೂಲಗಳನ್ನು ಆಧರಿಸಿ ನಡೆಸಲಾಗಿದೆ ಪತ್ರಿಕೆಗಳು ಪುಸ್ತಕಗಳು ಜನಗಣತಿಯ ವರದಿಗಳು ಗ್ರಂಥಗಳು ಪಿಎಚ್ ಡಿ ಮಹಾಪ್ರಬಂಧಗಳು ಸಂಶೋಧನಾ ಲೇಖನಗಳು ಸರ್ಕಾರದ ವರದಿಗಳು ಮತ್ತು ಅಂತರ್ಜಾಲದ ಸರ್ಕಾರದ ಅಧಿಕೃತ ಮಾಹಿತಿಗಳನ್ನು ಆಧರಿಸಿ ಈ ಸಂಶೋಧನಾ ಲೇಖನವನ್ನು ಸಿದ್ಧಪಡಿಸಲಾಗಿದೆ.

1901 ರಿಂದ 2011ರ ದಶಕಗಳಲ್ಲಿ ಭಾರತ ಮತ್ತು ಕರ್ನಾಟಕದಲ್ಲಿ ಜನಸಂಖ್ಯೆಯಲ್ಲಿನ ಲಿಂಗಾನುಪಾತವನ್ನು ತೋರಿಸುವ ಕೋಷ್ಟಕ.

**ಕೋಷ್ಟಕ 0.1**

| ವರ್ಷ | ಭಾರತ | ಕರ್ನಾಟಕ |
|---|---|---|
| 1901 | 972 | 983 |
| 1911 | 964 | 981 |
| 1921 | 955 | 969 |
| 1931 | 950 | 965 |
| 1941 | 945 | 960 |
| 1951 | 946 | 966 |
| 1961 | 941 | 959 |
| 1971 | 930 | 957 |
| 1981 | 934 | 963 |
| 1991 | 927 | 960 |
| 2001 | 933 | 965 |
| 2011 | 940 | 973 |

**ಆಧಾರ. ಭಾರತದ ಜನಗಣತಿ ಆಯುಕ್ತರ ವರದಿ ನವದೆಹಲಿ.**

**ವಿಶ್ಲೇಷಣೆ.**

1901ರ ಜನಗಣತಿಯು ಭಾರತ ದೇಶದಲ್ಲಿ ನಡೆದ ಪ್ರಪ್ರಥಮ ಅಧಿಕೃತ ಜನಗಣತಿಯಾಗಿದೆ. ಈ ಜನಗಣತಿಯ ವರದಿಯ ಪ್ರಕಾರ ಭಾರತದಲ್ಲಿ ಸಾವಿರ ಪುರುಷರಿಗೆ 972 ಮಹಿಳೆಯರಿರುವುದು ಕಂಡು ಬಂದಿದೆ ಕರ್ನಾಟಕದಲ್ಲಿ 1901ರ ಜನಗಣತಿಯಲ್ಲಿ 983 ಮಹಿಳೆಯರು ಇದ್ದರು ಎಂದು ವರದಿ ಮಾಡಲಾಗಿದೆ ಈ ಅವಧಿಯಲ್ಲಿ ಇದ್ದಂತಹ ಮಹಿಳೆಯರ ಸಂಖ್ಯೆ ಕಾಲ ಗತಿಸಿದಂತೆ ಗಣನೀಯವಾಗಿ ಕಡಿಮೆಯಾಗಿರುವುದು ಕಂಡುಬಂದಿದೆ 1911ರ ಜನಗಣತಿಯಲ್ಲಿ ಭಾರತದಲ್ಲಿ 964 ಮಹಿಳೆಯರಿದ್ದರು ಕರ್ನಾಟಕದಲ್ಲಿ 981 ಮಹಿಳೆಯರಿದ್ದರೂ ಎಂದು ವರದಿ ಮಾಡಲಾಗಿದೆ ಈ ವರದಿಯಲ್ಲಿ 1901ರ ಜನಗಣತಿ ಮತ್ತು 1911ರ ಜನಗಣತಿಯ ಮಧ್ಯೆ ಇಬ್ಬರು ಮಹಿಳೆಯರು ಕಡಿಮೆಯಾಗಿರುವುದು ಕಂಡುಬಂದಿದೆ.

1921 ರಲ್ಲಿ ಜರುಗಿದ ಜನಗಣತಿಯಲ್ಲಿ ಭಾರತದಲ್ಲಿ 955 ಮಹಿಳೆಯರು ಇದ್ದರೆ ಕರ್ನಾಟಕದಲ್ಲಿ 969 ಮಹಿಳೆಯರು ಇದ್ದರೂ ಎಂದು ವರದಿ ಮಾಡಲಾಗಿದೆ. ಪುನಃ 12 ಮಹಿಳೆಯರ ಕೊರತೆ ಎದ್ದು ಕಾಣುತ್ತಿದೆ. 1931ರ ಜನಗಣತಿಯಲ್ಲಿ ದೇಶದಲ್ಲಿ 950 ಮಹಿಳೆಯರಿದ್ದರೆ ಕರ್ನಾಟಕದಲ್ಲಿ 965 ಮಹಿಳೆಯರು ಕಂಡುಬಂದಿದ್ದಾರೆ. ಮತ್ತೆ ನಾಲ್ಕು ಮಹಿಳೆಯರು ಕೊರತೆಯಾಗಿರುವುದು ಕಂಡುಬಂದಿದೆ. 1941ರ ಜನಗಣತಿಯಲ್ಲಿ ದೇಶದಲ್ಲಿ 945 ಮಹಿಳೆಯರು ಕಂಡುಬಂದಿದ್ದರೆ ಕರ್ನಾಟಕದಲ್ಲಿ 960 ಮಹಿಳೆಯರು ಕಂಡುಬಂದಿದ್ದಾರೆ ಮತ್ತೆ ಪುನಹ ಐದು ಜನ ಮಹಿಳೆಯರ ಕೊರತೆಯು ಎದ್ದು ಕಾಣುತ್ತಿದೆ ಅಂದರೆ ಹಿಂದಿನ ಜನಗಣತಿಗೆ ಹೋಲಿಸಿದಾಗ ಕೊರತೆ ಕಂಡು ಬಂದಿದೆ.

1951ರ ಜನಗಣತಿಯಲ್ಲಿ ದೇಶದಲ್ಲಿ 946 ಮಹಿಳೆಯರು ಕಂಡುಬಂದಿದ್ದು ಹಿಂದಿನ ಜನಗಣತಿಗೆ ಹೋಲಿಸಿದಾಗ ಒಬ್ಬ ಮಹಿಳೆ ಹೆಚ್ಚಾಗಿರುವುದು ಕಂಡುಬಂದಿದೆ ಹಾಗೆಯೇ ಕರ್ನಾಟಕದಲ್ಲಿ 966 ಮಹಿಳೆಯರು ಇದ್ದರು ಎಂದು ವರದಿ ಮಾಡಲಾಗಿದೆ ಇಲ್ಲಿಯೂ ಸಹ ಆರು ಜನ ಮಹಿಳೆಯರು ಹಿಂದಿನ ಜನಗಣತಿಗೆ ಹೋಲಿಸಿದಾಗ ಹೆಚ್ಚಾಗಿರುವುದು ಆಶಾದಾಯಕ ಬೆಳವಣಿಗೆಯಾಗಿ ಕಂಡು ಬಂದಿದೆ. 1961ರ ದೇಶದ ಜನಗಣತಿಯಲ್ಲಿ 941 ಮಹಿಳೆಯರು ಕಂಡುಬಂದಿದ್ದರೆ, ಕರ್ನಾಟಕದಲ್ಲಿ 959 ಮಹಿಳೆಯರು ಕಂಡುಬಂದಿದ್ದು ಮತ್ತೆ ಪುನಃ ಏಳು ಜನ ಮಹಿಳೆಯರು ಕಡಿಮೆಯಾಗಿರುವುದು ದುರ್ದೈವದ ಸಂಗತಿಯಾಗಿದೆ.

1971ರ ಜನಗಣತಿಯಲ್ಲಿ ದೇಶದಲ್ಲಿ 930 ಮಹಿಳೆಯರಿದ್ದರೆ ಕರ್ನಾಟಕದಲ್ಲಿ 957 ಮಹಿಳೆಯರು ಇದ್ದರು ಎಂದು ವರದಿಯಾಗಿದೆ. ಇಲ್ಲಿಯೂ ಸಹ ಎರಡು ಜನ ಮಹಿಳೆಯರು ಹಿಂದಿನ ಜನಗಣತಿಗೆ ಹೋಲಿಕೆ ಮಾಡಿದಾಗ ಕಡಿಮೆಯಾಗಿರುವುದು ಕಂಡುಬಂದಿದ್ದು, ದೇಶದಲ್ಲಿ ಏನು ನಡೆಯುತ್ತಿದೆ? ಎಂಬ ಸಂಶಯವನ್ನು ಹುಟ್ಟು ಹಾಕಿತ್ತು. 1981ರ ಜನಗಣತಿಯಲ್ಲಿ ಭಾರತದಲ್ಲಿ 934 ಮಹಿಳೆಯರಿದ್ದರೆ,

ಕರ್ನಾಟಕದಲ್ಲಿ 963 ಮಹಿಳೆಯರು ಇದ್ದರು ಎಂದು ಅಂಕಿ ಅಂಶ ತಿಳಿಸಿದೆ ಹಿಂದಿನ ಜನಗಣತಿಗೆ ಹೋಲಿಸಿದಾಗ ಆರು ಜನ ಮಹಿಳೆಯರು ಹೆಚ್ಚಾಗಿರುವುದು ಸಂತೋಷದಾಯಕವಾದ ಮತ್ತು ಆಶಾದಾಯಕವಾದ ಬೆಳವಣಿಗೆಯಾಗಿದೆ. 1991 ರ ಜನಗಣತಿಯಲ್ಲಿ ದೇಶದಲ್ಲಿ ಮಹಿಳೆಯರ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು ಹಾಗೆಯೇ ಕರ್ನಾಟಕದಲ್ಲಿ 960 ಮಹಿಳೆಯರು ಇದ್ದು ಹಿಂದಿನ ಜನಗಣತಿಗೆ ಹೋಲಿಸಿದಾಗ ಮೂರು ಜನ ಮಹಿಳೆಯರು ಕಡಿಮೆಯಾಗಿರುವುದು ಕಂಡುಬಂದಿದೆ. 2001 ರ ಜನಗಣತಿಯಲ್ಲಿ ದೇಶದಲ್ಲಿ 933 ಮಹಿಳೆಯರು ಇದ್ದರೆ ಹಿಂದಿನ ಜನಗಣತಿಗೆ ಹೋಲಿಸಿದಾಗ ಆರು ಜನ ಮಹಿಳೆಯರು ಹೆಚ್ಚಾಗಿರುವುದು ಕಂಡುಬಂದಿದ್ದು ಇದು ಸಹ ಆಶಾದಾಯಕ ಬೆಳವಣಿಗೆಯಾಗಿದೆ. ಹಾಗೆಯೇ ಕರ್ನಾಟಕದಲ್ಲಿ 965 ಮಹಿಳೆಯರು ಇದ್ದದ್ದನ್ನು ಗಮನಿಸಬಹುದು ಹಿಂದಿನ ಜನಗಣತಿಗೆ ಹೋಲಿಸಿದಾಗ ಐದು ಜನ ಮಹಿಳೆಯರು ಹೆಚ್ಚಿಗೆ ಇರುವುದು ಸಂತೋಷದ ಸಂಗತಿ. 2011ರ ಜನಗಣತಿ ದೇಶದಲ್ಲಿ ಅತ್ಯಂತ ಪ್ರಮುಖವಾದ ಔಚಿತ್ಯಪೂರ್ಣವಾದ ಜನಗಣತಿಯಾಗಿದ್ದು ಇದರಲ್ಲಿ 940 ಮಹಿಳೆಯರು ಇದ್ದದ್ದನ್ನು ಗಮನಿಸಬಹುದು ಕರ್ನಾಟಕದಲ್ಲಿ ನಿಜವಾಗಿಯೂ ತುಂಬಾ ಸಂತೋಷದ ಸಂಗತಿ ಎಂದರೆ 973 ಮಹಿಳೆಯರು ದೊರೆತಿರುವುದು ಶ್ಲಾಘನೀಯ. ಆದರೂ ಸಹ ನಿರೀಕ್ಷಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಮಹಿಳೆಯರ ಜನನ ದರವನ್ನು ಉತ್ತೇಜಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಸಹ ನಿರೀಕ್ಷಿಸಿದಂತಹ ಫಲಿತಾಂಶ ದೊರೆಯದೆ ಇರುವುದನ್ನು 2011ರ ಜನಗಣತಿಯ ಅಂಕಿ ಅಂಶಗಳು ಹೊರಗೆಡವಿವೆ

2011ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ಇರುವಂತಹ ಲಿಂಗಾನುಪಾತವನ್ನು ತೋರಿಸುವ ಕೋಷ್ಟಕ.

**ಕೋಷ್ಟಕ 0.2**

| ಜಿಲ್ಲೆ | ಸಂಖ್ಯೆ |
|---|---|
| ಉಡುಪಿ | 1094 |
| ದಕ್ಷಿಣ ಕನ್ನಡ | 1020 |
| ಕೊಡಗು | 1019 |
| ಹಾಸನ | 1010 |
| ಚಿಕ್ಕಮಗಳೂರು | 1008 |
| ಶಿವಮೊಗ್ಗ | 998 |
| ಮಂಡ್ಯ | 995 |

| | |
|---|---|
| ರಾಯಚೂರು | 1000 |
| ಚಾಮರಾಜನಗರ | 993 |
| ಯಾದಗಿರಿ | 989 |
| ಬಾಗಲಕೋಟೆ | 989 |
| ಕೊಪ್ಪಳ | 98 |
| ಮೈಸೂರು | 985 |
| ತುಮಕೂರು | 984 |
| ಬಳ್ಳಾರಿ | 983 |
| ಗದಗ | 982 |
| ಉತ್ತರ ಕನ್ನಡ | 979 |
| ಚಿತ್ರದುರ್ಗ | 974 |
| ಬೆಳಗಾವಿ | 973 |
| ಧಾರವಾಡ | 971 |
| ಕಲಬುರಗಿ | 971 |
| ರಾಮನಗರ | 972 |
| ಕೋಲಾರ | 979 |
| ಚಿಕ್ಕಬಳ್ಳಾಪುರ | 972 |
| ವಿಜಯಪುರ | 960 |
| ಬೀದರ್ | 956 |
| ಬೆಂಗಳೂರು ಗ್ರಾಮಾಂತರ | 946 |
| ಬೆಂಗಳೂರು ನಗರ | 916 |

**ಆಧಾರ: ಭಾರತದ ಜನಗಣತಿಯ ವರದಿ ನವದೆಹಲಿ 2011**

ಮೇಲ್ಕಂಡ ಕೋಷ್ಟಕವನ್ನು ಗಮನಿಸಿದಾಗ ಕರ್ನಾಟಕದಲ್ಲಿ ಅತಿ ಹೆಚ್ಚು ಲಿಂಗಾನುಪಾತವನ್ನು ಹೊಂದಿರುವ ಜಿಲ್ಲೆ ಉಡುಪಿ ಜಿಲ್ಲೆ ಯಾಗಿದ್ದು, ಎರಡನೆಯ ಸ್ಥಾನವನ್ನು ದಕ್ಷಿಣ ಕನ್ನಡ ಜಿಲ್ಲೆ ಪಡೆದುಕೊಂಡಿದ್ದು ಮೂರನೇ ಸ್ಥಾನವನ್ನು ಕೊಡಗು ಅಥವಾ ಮಡಿಕೇರಿ ಜಿಲ್ಲೆ ತನ್ನದಾಗಿಸಿಕೊಂಡಿದೆ

ದುರಾದೃಷ್ಟವಶಾತ್ ಲಿಂಗಾನುಪಾತದಲ್ಲಿ ಕರ್ನಾಟಕದಲ್ಲಿ ಅತ್ಯಂತ ಕಳಪೆ ಮತ್ತು ಅತಿ ಕಡಿಮೆ ಸಂಖ್ಯೆಯ ಲಿಂಗಾನುಪಾತವನ್ನು ಹೊಂದಿರುವ ಜಿಲ್ಲೆ ಬೆಂಗಳೂರು ನಗರ ಜಿಲ್ಲೆ ಯಾಗಿದೆ.

ದೇಶದಲ್ಲಿ 1901 ರಿಂದ 2011ರವರೆಗೆ ನಡೆದಿರುವಂತಹ ಎಲ್ಲಾ ಜನಗಣತಿಯಲ್ಲಿಯೂ ಕೇರಳ ರಾಜ್ಯ ಮತ್ತು ಪಾಂಡಿಚರಿ ಯನ್ನು ಬಿಟ್ಟರೆ ಅಂದರೆ ಕೇರಳ ರಾಜ್ಯದಲ್ಲಿ ಸಾವಿರ ಪುರುಷರಿಗೆ 1086 ಮಹಿಳೆಯರು, ಪಾಂಡಿಚರಿ ಅಥವಾ ಪುದುಚೇರಿಯಲ್ಲಿ ಸಾವಿರ ಪುರುಷರಿಗೆ 1038 ಮಹಿಳೆಯರು ಇರುವುದನ್ನು ಬಿಟ್ಟರೆ, ಉಳಿದ ಎಲ್ಲಾ ರಾಜ್ಯಗಳಲ್ಲೂ ಮಹಿಳೆಯರ ಪ್ರಮಾಣ ಕಡಿಮೆ ಇದೆ. ಕರ್ನಾಟಕದಲ್ಲಿಯೂ ಸಹ ಇದು ಹೊರತಾಗಿಲ್ಲ ಆದುದರಿಂದ ಇಂತಹ ಲಿಂಗ ಸರಾಸರಿಯಲ್ಲಿನ ವ್ಯತ್ಯಾಸಗಳಿಗೆ ಹಲವಾರು ಕಾರಣಗಳನ್ನು ವಿಶ್ಲೇಷಿಸಲಾಗಿದೆ ಜನನದ ಅವಧಿಯಲ್ಲಿ ಲಿಂಗ ವ್ಯತ್ಯಾಸ ನಡೆಯುತ್ತಿರುವುದನ್ನು ಗಮನಿಸಲಾಗಿದೆ ಅನೇಕ ಸಂದರ್ಭಗಳಲ್ಲಿ ಗಂಡು ಮಗುವಿನ ಜನನದ ಕಡೆಗೆ ಹೆಚ್ಚು ಒಲವು ತೋರಿಸಿ, ಗಂಡು ಮಕ್ಕಳ ಸಂಖ್ಯೆಯನ್ನು ಮಾತ್ರ ದಾಖಲಿಸುವಂತಹ ಪರಿಸ್ಥಿತಿ ಇಂದಿಗೂ ಇರುವುದರಿಂದ ಈ ಪ್ರವೃತ್ತಿ ಹೆಣ್ಣು ಮಕ್ಕಳ ಸಂಖ್ಯೆಯನ್ನು ಕಡಿಮೆ ದಾಖಲಿಸಿ , ಗಂಡು ಮಕ್ಕಳ ಸಂಖ್ಯೆಯನ್ನು ಹೆಚ್ಚು ದಾಖಲಿಸುವ ಸಂದರ್ಭಗಳು ಭಾರತದಂತಹ ರೂಢಿ ಸಂಪ್ರದಾಯದ ರಾಷ್ಟ್ರದಲ್ಲಿ ನಡೆಯುತ್ತಿರುವುದು ಈ ಲಿಂಗ ಸರಾಸರಿಯಲ್ಲಿನ ವ್ಯತ್ಯಾಸಗಳಿಗೆ ಒಂದು ಪ್ರಮುಖ ಕಾರಣ ಎಂದು ಪತ್ತೆಹಚ್ಚಲಾಗಿದೆ ಯಾವುದೇ ಸಂದರ್ಭ ಒದಗಿ ಬಂದಾಗಲೂ ಸಹ ಸತ್ಯಾಂಶಕ್ಕೆ ಹೊರತಾದ ಅಂಕಿ ಅಂಶವನ್ನು ದಾಖಲಿಸದಂತೆ ಎಚ್ಚರ ವಹಿಸುವ ಅವಶ್ಯಕತೆ ಇದೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಇಂತಹ ವ್ಯತಿರಿಕ್ತ ವ್ಯತ್ಯಾಸಕ್ಕೆ ಅತ್ಯಂತ ಪ್ರಬಲ ಕಾರಣ, ಹೆಣ್ಣು ಶಿಶುಗಳ ಭ್ರೂಣ ಹತ್ಯೆ ಎಂಬುದರಲ್ಲಿ ಎರಡು ಮಾತಿಲ್ಲ. ಹಲವಾರು ಸಂಶೋಧನೆಗಳು ಈ ವಿಚಾರವನ್ನು ಮತ್ತು ಸತ್ಯ ಸಂಗತಿಯನ್ನು ಸಂಶೋಧಿಸಿವೆ. ಮಗು ಜನನವಾಗುವುದಕ್ಕಿಂತ ಮುಂಚೆಯೇ ಜನಿಸುವ ಮಗು ಗಂಡು ಮಗು ಅಥವಾ ಹೆಣ್ಣು ಮಗುವೋ ಎಂದು ಲಿಂಗ ಪತ್ತೆ ಹಚ್ಚುವ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು ಜನಿಸುವ ಮಗು ಹೆಣ್ಣು ಶಿಶು ಎಂಬುದು ತಿಳಿದ ನಂತರ ಜನಿಸುವ ಮುಂಚೆಯೇ ಭ್ರೂಣ ಹತ್ಯೆ ಜರುಗಿಸುವ ಮೂಲಕ ಹೆಣ್ಣು ಮಕ್ಕಳ ಹತ್ಯೆ ನಿರಂತರವಾಗಿ ನಡೆಯುತ್ತಿದೆ. ಈ ಕಾರ್ಯದಲ್ಲಿ ಪಾಲ್ಗೊಳ್ಳುವ ವೈದ್ಯರು ಮತ್ತು ದಾದಿಯರಿಗೆ ಕಠಿಣ ಶಿಕ್ಷೆ ವಿಧಿಸುವ, ದಂಡವನ್ನು ಹಾಕುವ ಕಾನೂನು ಇದ್ದರೂ ಸಹ ಕದ್ದು ಮುಚ್ಚಿ ಈ ಕಾರ್ಯ ನಡೆಯುತ್ತಿರುವುದರಿಂದಲೇ , ಲಿಂಗ ಸಂಯೋಜನೆ ಅಥವಾ ಸರಾಸರಿಯಲ್ಲಿನ ವ್ಯತ್ಯಾಸಕ್ಕೆ ಕಾರಣವಾಗಿದೆ ಎಂಬುದನ್ನು ಪತ್ತೆಹಚ್ಚಲಾಗಿದೆ ಇತ್ತೀಚಿಗೆ 2025ರಲ್ಲಿ ಕರ್ನಾಟಕದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿ ನೂರಕ್ಕೂ ಹೆಚ್ಚು ಹೆಣ್ಣು ಶಿಶುಗಳ ಭ್ರೂಣ ಹತ್ಯೆ ನಡೆದಿರುವುದು ಮಾನವನ ಕುಲಕ್ಕೆ ಕಳಂಕ ತಂದಿದೆ ಈ ಹೀನ ಕೆಲಸದಲ್ಲಿ ಪಾಲ್ಗೊಂಡಿದ್ದ ವೈದ್ಯರು ಸಹ ಜೈಲು ಪಾಲಾಗಿರುವುದು ಈಗ ಇತಿಹಾಸ.

ಲಿಂಗಾನುಪಾತದ ವ್ಯತ್ಯಾಸಕ್ಕೆ ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಪತ್ತೆಹಚ್ಚಲ್ಪಟ್ಟಿರುವ ಮತ್ತೊಂದು ಕಾರಣ ಹೆಣ್ಣು ಮಗು ಎಂಬ ನಿರ್ಲಕ್ಷ ಧೋರಣೆ ಹೆಣ್ಣು ಮಗು ಜನಿಸಿದರೆ ನನ್ನ ಕುಟುಂಬ ವರದಕ್ಷಿಣೆಯನ್ನು ನೀಡುವ ಮೂಲಕ ಮದುವೆ ಮಾಡಲಾರದ ಅಸಹಾಯಕತೆಯಿಂದಾಗಿ ಇಂತಹ ಅಲಕ್ಷ್ಯ ಧೋರಣೆ ಮುಂದುವರೆದಿದೆ ಹೆಣ್ಣು ಮಗು ಕುಟುಂಬಕ್ಕೆ ಭಾರ, ಖರ್ಚು ವೆಚ್ಚಗಳಿಗೆ ಭಾರ ಎಂಬ ಕಾರಣಗಳಿಂದಾಗಿ ಹೆಣ್ಣು ಶಿಶುವಿಗೆ ನಿರ್ಲಕ್ಷ ವಹಿಸುವ ಮೂಲಕ ಅಪೌಷ್ಟಿಕತೆಗೆ ಒಳಗಾಗಿ ಹೆಣ್ಣು ಶಿಶುಗಳ ಮರಣ ಹೆಚ್ಚಾಗಿರುವುದು ವೈದ್ಯಕೀಯ ಸಂಶೋಧನೆಯಿಂದ ಕಂಡು ಬಂದಿದೆ. ಜನನದ ಸಂದರ್ಭದಲ್ಲಿ ಹೆಚ್ಚಾಗುತ್ತಿರುವ ತಾಯಂದಿರ ಮರಣ ವಲಸೆಯಲ್ಲಿ ವ್ಯತ್ಯಾಸದ ದತ್ತಾಂಶಗಳನ್ನು ಲಗತ್ತಿಸುವ ಮೂಲಕ ಹೆಣ್ಣು ಮಕ್ಕಳ ಕಡಿಮೆ ಸಂಖ್ಯೆಯನ್ನು ತೋರಿಸುವಂತಹ ಸಂದರ್ಭಗಳು ಉಂಟು ತಾಯಂದಿರ ಮರಣ ಅಥವಾ ಮಾತೃ ಮರಣ ಹಲವಾರು ಕಾರಣಗಳಿಂದಾಗಿ ಕರ್ನಾಟಕದಲ್ಲಿ ಹೆಚ್ಚುತ್ತಿರುವುದನ್ನು ಕರ್ನಾಟಕ ರಾಜ್ಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪತ್ತೆ ಹಚ್ಚಿದೆ ಆದರೂ ಇಂತಹ ಪ್ರಕರಣಗಳನ್ನು ಪತ್ತೆಹಚ್ಚಲು ಈ ಇಲಾಖೆಯಲ್ಲಿ ಪ್ರತ್ಯೇಕವಾದ ತಂಡವನ್ನು ರಚಿಸಲಾಗಿದೆ. ಬಾಲ್ಯ ವಿವಾಹ ಪದ್ಧತಿ ಕಾನೂನಿನ ಮೂಲಕ ರದ್ದಾಗಿದ್ದರೂ ಸಹ ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ನಡೆಯುತ್ತಿರುವುದನ್ನು ಗಮನಿಸಬಹುದು ವಿಶೇಷವಾಗಿ ಕರ್ನಾಟಕದ ಉತ್ತರ ಭಾಗದಲ್ಲಿ ಅಥವಾ ಉತ್ತರ ಕರ್ನಾಟಕದಲ್ಲಿ ಬಾಲ್ಯ ವಿವಾಹ ಪದ್ಧತಿಯ ಬಗ್ಗೆ ಹೆಚ್ಚು ಒಲವು ಇರುವುದು ಕಂಡುಬಂದಿದೆ ಸಣ್ಣ ವಯಸ್ಸಿನಲ್ಲಿಯೇ ವಿವಾಹವಾಗುವುದರಿಂದ ಗರ್ಭ ಧರಿಸಿ ಸಾವನ್ನಪ್ಪುವ ಸಂಖ್ಯೆ ಹೆಚ್ಚಾಗುತ್ತಿರುವುದು ಸಹ ಲಿಂಗ ಅಸಮಾನತೆಗೆ ಒಂದು ಕಾರಣವಾಗಿದೆ. ದೇಶದಲ್ಲಿರುವಂತಹ ಕೆಲವು ಸಾಂಸ್ಕೃತಿಕ ಆಚರಣೆಗಳು ಸಹ ಮಹಿಳೆಯರನ್ನು ಬಲಿ ತೆಗೆದುಕೊಳ್ಳುತ್ತಿವೆ ಎಂಬುದನ್ನು ಇತ್ತೀಚಿನ ಸಂಶೋಧನೆಗಳು ದೃಢಪಡಿಸಿವೆ ದೇವದಾಸಿ ಪದ್ಧತಿ , ಇಂದಿಗೂ ಜಾರಿಯಲ್ಲಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ದೇಶಕ್ಕೆ ಕಳಂಕ ತಂದೊಡ್ಡಿದೆ ಎಷ್ಟೇ ಕಾನೂನುಗಳು ಲಿಂಗ ಅಸಮಾನತೆಯನ್ನು ತೊಡೆದು ಹಾಕಲು ಪ್ರಯತ್ನ ಪಟ್ಟರು ನಿರೀಕ್ಷಿಸಿದ ಫಲಿತಾಂಶ ದೊರೆಯದೆ ಇರುವುದು ವಿಷಾದನೀಯ ಆದರೆ ಇತ್ತೀಚಿನ ಜಾಗತೀಕರಣ ಉದಾರೀಕರಣ ಖಾಸಗಿಕರಣ ಹಾಗೂ ಮಹಿಳೆಯರ ಸಬಲೀಕರಣದ ಕಾನೂನುಗಳು ಹೆಚ್ಚು ಬಲಿಷ್ಠವಾಗುತ್ತಿರುವುದರಿಂದ ಜೊತೆಗೆ ಶಿಕ್ಷಣದಲ್ಲಿ ಮಹಿಳೆಯರ ದಾಪುಗಾಲು ಹೆಚ್ಚುತ್ತಿರುವುದರಿಂದ ಲಿಂಗ ಸರಾಸರಿ ಮುಂದೊಂದು ದಿನ ಸರಿಯಾಗಬಹುದು ಎಂದು ಭಾವಿಸಬಹುದು.

**ಸಲಹೆಗಳು.**

1.ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಭ್ರೂಣ ಹತ್ಯೆ ಮಾಡುವಂತಹ ಅಥವಾ ಪತ್ತೆಹಚ್ಚುವಂತಹ ವೈದ್ಯರು ಮತ್ತು ದಾದಿಯರ ಕೃತ್ಯದ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯವಶ್ಯಕವಾಗಿದ್ದು ಕಠಿಣವಾದ ಶಿಕ್ಷೆಯನ್ನು ಜಾರಿ ಮಾಡಬೇಕಾದ ಅನಿವಾರ್ಯತೆ ಇದೆ.

2.ಮಹಿಳೆಯರ ಕ್ಷೇಮಾಭಿವೃದ್ಧಿಗೋಸ್ಕರವಾಗಿ ಪ್ರತ್ಯೇಕವಾದ ಕ್ಯಾಬಿನೆಟ್ ದರ್ಜೆಯ ಮಂತ್ರಿ ಇರುವುದರಿಂದ ಅಭಿವೃದ್ಧಿ ಪರ್ವ ಅಂದರೆ ಮಹಿಳಾ ಸಬಲೀಕರಣ ವೇಗವಾಗಿ ಜರುಗುವಂತೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ.

3.ಲಿಂಗ ಅಸಮಾನತೆಯನ್ನು ತೊಡೆದು ಹಾಕುವ ದಿಸೆಯಲ್ಲಿ ಜಾಗೃತಿ ಶಿಕ್ಷಣ ಜಾರಿಯಾಗುವಂತೆ ನೋಡಿಕೊಳ್ಳಬೇಕು ಈ ದಿಕ್ಕಿನಲ್ಲಿ ಹಲವಾರು ಸ್ವಯಂ ಸೇವಾ ಸಂಘಗಳು ಪಾಲ್ಗೊಂಡು ಪ್ರಾಮಾಣಿಕ ಪ್ರಯತ್ನ ಮಾಡುವ ಅವಶ್ಯಕತೆ ಇದೆ.

4.ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಲಿಂಗ ಅಸಮಾನತೆಯನ್ನು ತೊಡೆದು ಹಾಕುವ ಸಲುವಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಮತ್ತು ಭ್ರಷ್ಟಾಚಾರ ರಹಿತ ಅನುಷ್ಠಾನಗೊಳಿಸುವ ದಿಟ್ಟ ಕ್ರಮ ಕೈಗೊಳ್ಳಬೇಕು.

5.ಕರ್ನಾಟಕದಲ್ಲಿ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಜಾರಿಗೆ ತಂದಂತಹ ಭಾಗ್ಯಲಕ್ಷ್ಮಿ ಯೋಜನೆಯನ್ನು ಮುಂದುವರಿಸುವ ಮೂಲಕ, ಹೆಣ್ಣು ಶಿಶುಗಳ ಜನನಕ್ಕೆ ಪ್ರೋತ್ಸಾಹ ನೀಡಬೇಕು 18 ವರ್ಷ ತುಂಬಿದ ತಕ್ಷಣ ನಿಯಮಾನುಸಾರ ಈ ಯೋಜನೆಯ ಅಡಿಯಲ್ಲಿ ನೀಡಬೇಕಾಗಿರುವ ಹಣವನ್ನು ಫಲಾನುಭವಿಗಳಿಗೆ ಪ್ರಾಮಾಣಿಕವಾಗಿ ತಲುಪಿಸುವಂತಹ ಕ್ರಮ ಅತ್ಯವಶ್ಯಕವಾಗಿದೆ.

6.ಮಹಿಳೆಯರಿಗೋಸ್ಕರವಾಗಿ ಆರಂಭವಾಗಿರುವ ಮಹಿಳಾ ವಿಶ್ವವಿದ್ಯಾನಿಲಯಗಳನ್ನು ಆರ್ಥಿಕ ಶಕ್ತಿ ನೀಡುವ ಮೂಲಕ ಬಲಿಷ್ಠ ಗೊಳಿಸಬೇಕು ಉನ್ನತ ಶಿಕ್ಷಣಕ್ಕೆ ಹಾಜರಾಗುವ ಮಹಿಳೆಯರಿಗೆ ಗರಿಷ್ಠ ಪ್ರಮಾಣದ ಶಿಷ್ಯವೇತನವನ್ನು ನೀಡುವ ಯೋಜನೆಯನ್ನು ಜಾರಿಗೆ ತರಬೇಕು ಮಹಿಳಾ ಮೀಸಲಾತಿ ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳುವಂತೆ ಕ್ರಮ ವಹಿಸಬೇಕು ವಿಶೇಷವಾಗಿ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವಂತಹ ಬದ್ಧತೆಯನ್ನು ಆಳುವ ಸರ್ಕಾರಗಳು ಕೈಗೊಂಡರೆ ಇಂತಹ ಲಿಂಗಾನುಪಾತದ ಅಸಮತೋಲನವನ್ನು ತೊಡೆದು ಹಾಕಬಹುದು.

**ಉಪಸಂಹಾರ**

ಶತಶತಮಾನಗಳಿಂದ ಭಾರತದಲ್ಲಿ ಸಂಪ್ರದಾಯದ ಪ್ರಭಾವಕ್ಕೆ ಸಿಲುಕಿ ನಲುಗಿರುವಂತಹ ಮಹಿಳೆಯರ ಪಾಲಿಗೆ ಸ್ವಾತಂತ್ರ್ಯ ನಂತರ ವರವಾಗಿ ಬಂದಿರುವಂತಹ ಕಾನೂನುಗಳನ್ನು, ಕಟ್ಟಳೆಗಳನ್ನು ಬದ್ಧತೆಯಿಂದ ಆಳುವ ಸರ್ಕಾರಗಳು ಜಾರಿಗೆ ತಂದರೆ, ಇಂತಹ ಸಮಸ್ಯೆಯನ್ನು ಪರಿಹರಿಸಬಹುದು ಇತ್ತೀಚಿಗೆ ಬಹು ಚರ್ಚೆಗೆ ಒಳಗಾಗಿರುವ ಮಹಿಳಾ ಮೀಸಲಾತಿಯನ್ನು ವಿಶೇಷವಾಗಿ ವಿಧಾನಸಭಾ ಚುನಾವಣೆಗಳು, ವಿಧಾನ ಪರಿಷತ್ತಿನ ಚುನಾವಣೆಗಳು, ಸ್ಥಳೀಯ ಸಂಸ್ಥೆಗಳು, ಲೋಕಸಭಾ

ಚುನಾವಣೆಗಳಲ್ಲಿ ಜಾರಿಗೆ ತರುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಮೂಲಕ ದೇಶದ ಪ್ರಗತಿಗೆ ಕೈಜೋಡಿಸಬಹುದು.

## ಗ್ರಂಥ ಋಣ.


1.ಭಾರತದ ಜನಗಣತಿ ವರದಿಗಳು 1901 ರಿಂದ 2011.

2.ಭಾರತದ ಜನಗಣತಿ ಆಯುಕ್ತಾಲಯ ನವದೆಹಲಿ. ಜನಗಣತಿ ಅಂಕಿ ಅಂಶಗಳು 2026.

3.ಡಾ ಶಶಿಕುಮಾರ್ .ಭಾರತದಲ್ಲಿ ಜನಸಂಖ್ಯಾ ಅಧ್ಯಯನ 2014, ಮೈಸೂರು ಬುಕ್ ಹೌಸ್ ಮೈಸೂರು.

4.ಪ್ರಜಾವಾಣಿ ದಿನಪತ್ರಿಕೆ. 12ನೇ ಜುಲೈ 2025

5.ವಿಜಯವಾಣಿ ದಿನಪತ್ರಿಕೆ. 9ನೇ ಮೇ 2024 ಮತ್ತು 13ನೇ ಜುಲೈ 2024

6.ವಿಜಯ ಕರ್ನಾಟಕ ದಿನಪತ್ರಿಕೆ. 12 ಏಪ್ರಿಲ್ 2025 ಮತ್ತು 2 ಜುಲೈ 2025.